

# ವನ್ಯಜೀವಿ ಸಂಘರ್ಷ ತಡೆಗೆ

# ‘ಹನುಮಾನ್’ ರಾಮಬಾಣವೇ?

ಹವಾಮಾನದ ಕ್ಷಿಪ್ರ ಬದಲಾವಣೆ ಮತ್ತು ಪರಿಣಾಮ ಅನೇಕ ಹೊಸ ಸವಾಲುಗಳಿಗೆ ನಾಂದಿ ಹಾಡುತ್ತಿದೆ. ಬೇಸಿಗೆ ಆರಂಭ ಆಗುತ್ತಿದ್ದಂತೆ ನೀರು ಆಹಾರ ಅರಸಿ ಆನೆಗಳು ಜನವಸತಿ ಪ್ರದೇಶಗಳಿಗೆ ಬರುತ್ತಿವೆ. ದಟ್ಟ ಕಾಡಂಚಿನ ಪ್ರದೇಶಗಳು ಮಾತ್ರ ಅಲ್ಲದೆ ಅರೆಮಲೆನಾಡು, ಬಯಲು ಸೀಮೆಯ ಪ್ರದೇಶಗಳಿಗೂ ವನ್ಯಜೀವಿಗಳು ದೇಶವ್ಯಾಪಿ ಬರುತ್ತಿವೆ. ಅದರಲ್ಲೂ ಬೇಸಿಗೆಯಲ್ಲಿ ನೈಸರ್ಗಿಕ ನೀರಿನ ಮೂಲಗಳು ಬತ್ತಿ ಹೋಗುವುದರಿಂದ ‘ಆನೆಗೆ ಮೂರು ಕಾಸಿನ ಮಜ್ಜಿಗೆ’ ಎನ್ನುವಂತೆ ಜೀವನಾಧಾರಕ್ಕೆ ನಿಸರ್ಗಮೂಲ ಆಗುತ್ತದೆ. ಆಗ ಆಹಾರ–ನೀರನ್ನು ಅರಸಿ ಅಲೆಯುತ್ತ ಅನಿವಾರ್ಯವಾಗಿ ಬರುತ್ತವೆ. ಹಾಗಾಗಿ ಆನೆ ನಡೆದಿದ್ದೇ ದಾರಿಯಾಗಿ ಕಾಲಡಿಗೆ ಸಿಲುಕಿದ ಪೈರು ಪಚ್ಚೆಯ ಜೊತೆ ಜನರ ಬದುಕೂ ನೆಲಸಮವಾಗುತ್ತದೆ. ಇಂತಹ ವೈರುಧ್ಯವನ್ನು ತಪ್ಪಿಸುವ ಉದ್ದೇಶದಿಂದ ಆಂಧ್ರಪ್ರದೇಶ ಸರ್ಕಾರ ಹೊಸ ಯೋಜನೆಯನ್ನು ರೂಪಿಸಿದೆ.

ಕಳೆದ ವಾರ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ‘ಹನುಮಾನ್’ ಯೋಜನೆಯನ್ನು ಘೋಷಣೆ ಮಾಡಿದ್ದಾರೆ. ಇದರ ಉದ್ದೇಶ ವನ್ಯಜೀವಿ ಸಂರಕ್ಷಣೆ ಮತ್ತು ನಾಗರಿಕ ಬದುಕಿಗೆ ಭದ್ರತೆ ನೀಡಲು ಸಾಧ್ಯ ಆಗುತ್ತದೆ ಎನ್ನಲಾಗುತ್ತಿದೆ. ಅಂದರೆ ಆನೆಗಳ ನಡವಿನ ಸಂಘರ್ಷ ಸಮಾಪ್ತಿಗೆ ಸೂತ್ರವೊಂದು ಸಿಕ್ಕಂತೆ ಆಗಿದೆ. ಯೋಜನೆ ಅನುಷ್ಠಾನಕ್ಕೆ ಕೃತಕ ಬುದ್ಧಿಮತ್ತೆ (ಎಐ) ಸೇರಿದಂತೆ ಆಧುನಿಕ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಲಾಗುತ್ತಿದೆ. ಕಾಡಿನ ಜೀವಿಗಳ ಮೇಲೆ ನಿರಂತರ ನಿಗಾ ಇಡುವುದು ಇದರ ಪ್ರಮುಖ ಅಂಶ. ಆಕಸ್ಮಿಕ ಸಂಘರ್ಷಗಳು ಸಂಭವಿಸಿದ ಪಕ್ಷದಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ನೂರು ಜಿಪಿಎಸ್ ಆಧಾರಿತ ವಾಹನಗಳನ್ನು ಮೀಸಲಿಡಲಾಗುತ್ತಿದೆ. ಅದರಲ್ಲಿ 93 ಕ್ಷಿಪ್ರ ಪ್ರತಿಕ್ರಿಯೆ ವಾಹನಗಳು ಮತ್ತು 7 ವನ್ಯಜೀವಿ ಆ್ಯಂಬುಲೆನ್ಸ್ ಕೂಡ ಸೇರಿರುತ್ತವೆ.

ಆಧುನಿಕ ತಂತ್ರಜ್ಞಾನದಿಂದ ವನ್ಯಜೀವಿಗಳ ಮೇಲೆ ನಿಗಾ ಇಡುವುದರಿಂದ, ಅವು ಏನಾದರೂ



ಕಾಡಂಚಿಗೆ ಬರುತ್ತಿವೆ ಎನ್ನುವ ಸೂಕ್ಷ್ಮ ಅರಿವಿಗೆ ಬಂದ ತಕ್ಷಣ ಆ ಬಗ್ಗೆ ಮುನ್ನೆಚ್ಚರಿಕೆ ಮಾಹಿತಿಯನ್ನು ಅರಣ್ಯದಂಚಿನ ಗ್ರಾಮಗಳಿಗೆ ನೀಡಲಾಗುತ್ತದೆ. ಇದರಿಂದ ಗ್ರಾಮಸ್ಥರ ರಕ್ಷಣೆ ಸಾಧ್ಯವಾಗುತ್ತದೆ. ಅಲ್ಲದೆ, ವನ್ಯಜೀವಿಗಳು ಜನವಸತಿ ಪ್ರದೇಶದತ್ತ ನುಗ್ಗದಂತೆಯೂ ಎಚ್ಚರಿಕೆ ತೆಗೆದುಕೊಳ್ಳಲು ಸಹಕಾರಿ ಆಗಲಿದೆ. ಅರಣ್ಯ ಅಧಿಕಾರಿಗಳು ಮತ್ತು ಸ್ಥಳೀಯ ಸಮುದಾಯಗಳ ನಡುವೆ ಸಮನ್ವಯವನ್ನು ಸಾಧಿಸಬಹುದು. ತಾತ್ಕಾಲಿಕ ಬಿಕ್ಕಟ್ಟು ನಿರ್ವಹಣೆಗೂ ರಚನಾತ್ಮಕ ಕಾರ್ಯಗಳನ್ನು ರೂಪಿಸಲು ಇದರಿಂದ ಸಾಧ್ಯ ಆಗುತ್ತದೆ ಎನ್ನುವುದು ಸದ್ಯದ ಲೆಕ್ಕಾಚಾರ.

‘ಹನುಮಾನ್’ ಯೋಜನೆ ಅನುಸಾರ ವನ್ಯಜೀವಿಗಳ ಚಲನವಲನಗಳ ಮೇಲೆ ಹದ್ದಿನ ಕಣ್ಣು ನೆಟ್ಟಿರುತ್ತದೆ. ಯಾವುದಾದರೂ ಪ್ರಾಣಿಗೆ ಆರೋಗ್ಯ ತೊಂದರೆ ಇಲ್ಲವೇ ಪರಸ್ಪರ ದಾಳಿಯ ಸಂದರ್ಭದಲ್ಲಿ ಗಾಯಗಳೇನಾದರೂ ಆದರೆ ಚಿಕಿತ್ಸೆಗೂ ಸೂಕ್ತ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ರಾಜ್ಯದ ಪ್ರಮುಖ ನಾಲ್ಕು ಆಯಕಟ್ಟಿನ ಪ್ರದೇಶದಲ್ಲಿ ‘ವನ್ಯಜೀವಿ ರಕ್ಷಣೆ ಮತ್ತು ಚಿಕಿತ್ಸಾ ಕೇಂದ್ರ’ವನ್ನು ತೆರೆಯಲಾಗುತ್ತಿದೆ. ಅಷ್ಟಕ್ಕೂ ಪ್ರಾಣಿಗಳ ದಾಳಿ ನಡೆದು ಸಂಭವನೀಯ ಅಪಾಯಕ್ಕೆ ಪರಿಹಾರ ನೀಡುವ ಬಗ್ಗೆಯೂ ಮಾರ್ಗದರ್ಶನ ನಿಯಮಗಳನ್ನು ಈ ಯೋಜನೆಯಡಿ ರೂಪಿಸಲಾಗಿದೆ. ವನ್ಯ ಜೀವಿ ಸಂಘರ್ಷದಲ್ಲಿ ಜೀವಹಾನಿಯಾದರೆ, ಮೃತಪಟ್ಟ ಕುಟುಂಬಕ್ಕೆ 10 ಲಕ್ಷ ರೂಪಾಯಿ ಪರಿಹಾರ, ಗಾಯಾಳಿಗೆ 2 ಲಕ್ಷ ನೀಡುವ ಸ್ಪಷ್ಟನೆಯೂ ಇದೆ.

ಋತುಮಾನ ಆಧಾರಿತ ವನ್ಯಜೀವಿಗಳ ಗುಣಲಕ್ಷಣಗಳನ್ನು ಅಧ್ಯಯನ ದಾಖಲೆಯನ್ನು ಸಂಗ್ರಹಿಸಲು ಸಾಧ್ಯ ಆಗುವುದರಿಂದ ಪ್ರಾಣಿಗಳ ಸ್ವಭಾವವನ್ನು ವಿಶ್ಲೇಷಿಸಲು ಸಾಧ್ಯ ಆಗುತ್ತದೆ. ಆ ಬಗ್ಗೆ ನಾಗರಿಕರಿಗೂ ಅರಿವು ಮೂಡಿಸುವ ಜಾಗೃತಿ ಕಾರ್ಯಕ್ರಮವನ್ನು ರೂಪಿಸಲು ಸಾಧ್ಯ ಆಗುತ್ತದೆ. ಇದರಿಂದ ಪರಿಸರ ಸಮತೋಲನ ಸಾಧಿಸಲು ಸಾಧ್ಯ ಆಗುತ್ತದೆ ಎಂದು ಅಂದಾಜಿಸಲಾಗಿದೆ.

■ ಕೆ. ರಾಘು